ಟೀ ಕುಡಿದು ಬೆಡ್‌ರೂಂಗೆ ಹೋಗಿ ಪುಸ್ತಕ ಕೈಯಲ್ಲಿ ಹಿಡಿದು ಕುಳಿತ. ವಸುಮತಿ ಕೆಲಸವಿಲ್ಲದಿದ್ದರೂ ಬೇಕೆಂದೆ ಅಡುಗೆ ಮನೆ ಮತ್ತು ಬೆಡ್‌ರೂಂ ನಡುವೆ ಹತ್ತಾರು ಬಾರಿ ಓಡಾಡಿದಳು. ಕಾರಣವಿಲ್ಲದೆ ಪ್ರಭಂಜನನನ್ನು ಮಾತನಾಡಿಸಿದಳು. ಸ್ಲೀವ್‌ಲೆಸ್ ರವಿಕೆ ತೊಟ್ಟವಳು ಗಳಿಗೆಗೊಮ್ಮೆ ಕೂದಲನ್ನು ಕೆರೆದು ನುಣುಪಾಗಿಸಿದ ಕಂಕುಳನ್ನು ಬೇಕೆಂದೆ ಕೈಯೆತ್ತಿ ಪ್ರಭಂಜನನಿಗೆ ಕಾಣುವಂತೆ ಪ್ರದರ್ಶಿಸಿದಳು. ಅಂದು ರಾತ್ರಿ ಪ್ರಭಂಜನ ಕೂಡ ಒಂದಿಷ್ಟು ಸಕಾರಾತ್ಮಕವಾಗಿ ಸ್ಪಂದಿಸಿದ. ಊಟದ ನಂತರ ಪುಸ್ತಕ ಕೈಗೆತ್ತಿಕೊಳ್ಳದೆ ಬೇಗನೆ ಮಂಚ ಸೇರಿದವನು ಹತ್ತಿರ ಬಂದವಳನ್ನು ಬರಸೆಳೆದು ಅಪ್ಪಿದ. ವಸುಮತಿಯ ದುರಾದೃಷ್ಟವೋ ಏನೋ, ದೇಹಕ್ಕೆ ದೇಹ ಬೆಸೆದುಕೊಂಡು ಉನ್ಮತ್ತಗೊಂಡಿರುವ ಗಳಿಗೆ ನಿನ್ನೆಯಷ್ಟೆ ಓದಿ ಮುಚ್ಚಿಟ್ಟ ಫ್ರಾಂಝ್ ಕಾಫ್ಕಾನ 'ಮೆಟಾಮಾರ್ಫಾಸಿಸ್' ಕತೆಯ ಗ್ರೇಗರ್ ಪಾತ್ರ ಪ್ರಭಂಜನನ ಮನದಲ್ಲಿ ಸುಳಿದು, ತಾವಿಬ್ಬರೂ ಒಂದು ದೊಡ್ಡ ಕ್ರಿಮಿಯಾಗಿ ರೂಪಾಂತರಗೊಳ್ಳುತ್ತಿರುವಂತೆ ಭಾಸವಾಗಿ, ಅಸಹ್ಯ ಭಾವನೆಯೊಂದು ಮೂಡಿ ಹೆಂಡತಿಯನ್ನು ದೂರತಳ್ಳಿ ಪಕ್ಕಕ್ಕೆ ಉರುಳಿದ. ಸುಖದ ಉತ್ತುಂಗದಲ್ಲಿದ್ದವಳನ್ನು ಎತ್ತಿ ಪಾತಾಳಕ್ಕೆ ಒಗೆದಂತಾಯಿತು. ಸದ್ದು ಕೇಳಿಸಿದತ್ತ ದೃಷ್ಟಿ ಹರಿಸಿದವಳಿಗೆ ಕೋಣೆಯ ಮೂಲೆಯಲ್ಲಿ ಪುಸ್ತಕ ಕೈಯಲ್ಲಿ ಹಿಡಿದು ಧ್ಯಾನಮಗ್ನನಾದ ಮುನಿಯಂತೆ ಕುಳಿತಿದ್ದ ಪ್ರಭಂಜನ ಕಣ್ಣಿಗೆ ಬಿದ್ದ. ಪ್ರಭಂಜನನಿಗೆ ಸೆಕ್ಸ್‌ನಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆಯೋ ಇಲ್ಲ, ತನ್ನ ಮೇಲೆ ನಿರಾಸಕ್ತಿ ಮೂಡುತ್ತಿದೆಯೋ ಎಂದು ಗೊಂದಲಕ್ಕೊಳಗಾದಳು ವಸುಮತಿ. ಮರುದಿನ ಅವನನ್ನು ಪರೀಕ್ಷೆಗೊಳಪಡಿಸುವ ಕಾರ್ಯತಂತ್ರವನ್ನು ರಾತ್ರಿಯೆಲ್ಲ ನಿದ್ದೆಗೆಟ್ಟು ಸಿದ್ಧಪಡಿಸಿದಳು.

★★★

ಪ್ರಭಂಜನನನ್ನು ಕತ್ರಿನಾಳ ಆಳೆತ್ತರದ ಫೋಟೊದ ಎದುರು ನಿಲ್ಲಿಸಿ ಅಂಗಡಿ ಒಳಹೊಕ್ಕ ವಸುಮತಿ ಬೇಕೆಂದೆ ಬಟ್ಟೆ ಹುಡುಕುವ ನೆವದಲ್ಲಿ ಅಂಗಡಿಯೊಳಗಿಂದ ಹೊರಬರಲು ಒಂದರ್ಧಗಂಟೆ ತಡಮಾಡಿದಳು. ಜನನಿಬಿಡ ಪ್ರದೇಶದ ಆಯಕಟ್ಟಿನ ಜಾಗದಲ್ಲಿರುವ 'ಇನ್ನರ್ ಕಂಫರ್ಟ್' ಹೆಸರಿನ ಆ ಬಟ್ಟೆಯಂಗಡಿ ಎದುರು ಅರೆಬರೆ ಪೋಷಾಕಿನಲ್ಲಿ ಅರೆಬೆತ್ತಲೆಯಾಗಿ ಕಂಗೊಳಿಸುತ್ತಿರುವ ಕತ್ರಿನಾಳ ದಿವ್ಯ ಸೌಂದರ್ಯಕ್ಕೆ ಒಂದುಕ್ಷಣದ ಮಟ್ಟಿಗಾದರೂ

